# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1752(1952) |
| ಸದಸ್ಯರ ಹೆಸರು | : | ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಬೆಂಗಳೂರನ್ನು ಹೊರತುಪಡಿಸಿ, ರಾಜ್ಯದ ಯಾವ ಯಾವ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಅಲ್ಲಿನ ನಾಗರಿಕರಿಗಾಗಿ ಬಡಾವಣೆಗಳನ್ನು ನಿರ್ಮಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಬೆಂಗಳೂರನ್ನು ಹೊರತುಪಡಿಸಿ, ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಾಗರೀಕರಿಗಾಗಿ ಬಡಾವಣೆಗಳನ್ನು ನಿರ್ಮಿಸಲು ಭೂಸ್ವಾಧೀನಪಡಿಸಿಕೊಂಡಿರುವ ವಿವರಗಳು ಈ ಕೆಳಕಂಡಂತೆ ಇರುತ್ತವೆ.<br><br>1. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಣಬರ್ಗಿ ಗ್ರಾಮದಲ್ಲಿ ಯೋಜನೆ ಸಂಖ್ಯೆ-61ನ್ನು 157ಎಕರೆ-01ಗುಂಟೆ-08ಆಣೆ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ.<br><br>2. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಿ.ಗೋನಾಳ್ ಗ್ರಾಮದ ವಿವಿಧ ಸ.ನಂ.ಗಳಲ್ಲಿ ಒಟ್ಟು ವಿಸ್ತೀರ್ಣ 101.98 ಎಕರೆ ಯಲ್ಲಿ ರೈತರ ಸಹಭಾಗಿತ್ವದಲ್ಲಿ ಶೇ.50:50 ಅನುಪಾತದಡಿ ವಸತಿ ವಿನ್ಯಾಸವನ್ನು ನಿರ್ಮಾಣ ಮಾಡಲಾಗುತ್ತಿರುತ್ತದೆ.<br><br>3. ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ರೈತರ ಸಹಭಾಗಿತ್ವದಡಿಯಲ್ಲಿ ಶೇ. 50:50 ಅನುಪಾತದಲ್ಲಿ ಚಾಮರಾಜನಗರ ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎಕರೆ-24ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಂಡಿದೆ.<br><br>4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಇಂದಾವರ ಗ್ರಾಮದ ವಿವಿಧ ಸರ್ವೆ ನಂಬರುಗಳಲ್ಲಿ 208ಎಕರೆ-37ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರ ಹಾಗೂ ರೈತರ ಸಹಭಾಗಿತ್ವದಡಿಯಲ್ಲಿ ಶೇ. 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಂಡಿದ. |
| ಆ) | ಈ ಬಡಾವಣೆಗಳನ್ನು ನಿರ್ಮಿಸಲು ಆಯಾ ಪ್ರಾಧಿಕಾರಗಳು ಎಷ್ಟು ಎಕರೆ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡಿವೆ; ಪ್ರತಿಯೊಂದು ಪ್ರಾಧಿಕಾರದ ವಿವರ ನೀಡುವುದು; | |

| | | |
|---|---|---|
| | | 5. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕುಂಜತ್ತಬೈಲು ಗ್ರಾಮದಲ್ಲಿ 17ಎಕರೆ-49ಗುಂಟೆ ಜಮೀನಿನಲ್ಲಿ ಬಡಾವಣೆ ನಿರ್ಮಿಸಲಾಗಿದೆ.<br><br>6. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ರಾಯಚೂರು ಗ್ರಾಮದ ಸರ್ವೆ ನಂ:1091/*/2 ರ ವಿಸ್ತೀರ್ಣ 04ಎಕರೆ-18ಗುಂಟೆ ಜಮೀನಿನಲ್ಲಿ ಬಡಾವಣೆ ನಿರ್ಮಿಸಲಾಗುತ್ತಿದೆ.<br><br>7. ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಗೋಪಶೆಟ್ಟಿಕೊಪ್ಪ ಗ್ರಾಮದ ಸ.ನಂ.ಗಳಲ್ಲಿ ಒಟ್ಟು ವಿಸ್ತೀರ್ಣ 104ಎಕರೆ-39ಗುಂಟೆ ಜಮೀನಿನಲ್ಲಿ ಯೋಜನೆ ಕೈಗೊಳ್ಳಲಾಗಿದೆ.<br><br>8. ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳಸಾಪೂರ ಗ್ರಾಮದ ರಿಸನಂ. 242/1, 2, 3, 4, 5, 6, 7 & 8 ಒಟ್ಟು ಕ್ಷೇತ್ರ 18ಎಕರೆ-19ಗುಂಟೆ ಜಮೀನಿನಲ್ಲಿ ಯೋಜನೆ ಕೈಗೊಳ್ಳಲಾಗಿದೆ.<br><br>9. ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಾಗರಗಾ ಗ್ರಾಮದ ಶೇ. 50-50 ರೈತರ ಸಹಭಾಗಿತ್ವದಲ್ಲಿ ಒಟ್ಟು 117ಎಕರೆ-05ಗುಂಟೆ ಜಮೀನಿನಲ್ಲಿ ಯೋಜನೆ ಕೈಗೊಳ್ಳಲಾಗಿದೆ.<br><br>10. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದಿಂದ ಬೂವನಹಳ್ಳಿ, ಕೆಂಚಟ್ಟವಳ್ಳಿ, ಗೇಕರವಳ್ಳಿ ಮತ್ತು ಸಮುದ್ರವಳ್ಳಿ ಗ್ರಾಮಗಳ ವಿವಿಧ ಸರ್ವೇ ನಂಬರ್‌ಗಳ ಒಟ್ಟು 1145ಎಕರೆ-32ಗುಂಟೆ ಜಮೀನಿನಲ್ಲಿ ಯೋಜನೆ ಕೈಗೊಳ್ಳಲಾಗಿದೆ.<br><br>11. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದಿಂದ 24.24 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಯೋಜನೆ ಕೈಗೊಳ್ಳಲಾಗಿದೆ. |
| ಇ) | ಯಾವ ಯಾವ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಹಳೆಯ ಬಡಾವಣೆಗಳಲ್ಲಿ ಲಭ್ಯವಿರುವ ನಿವೇಶನಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತದೆ? (ವಿವರ ಒದಗಿಸುವುದು) | 1. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ 2025-26 ನೇ ಸಾಲಿನಲ್ಲಿ ಒಟ್ಟು 94 ಬಿಡಿ/ಮೂಲೆ ನಿವೇಶನಗಳನ್ನು ಇ-ಹರಾಜು ಕರೆದಿದ್ದು, ಅದರಲ್ಲಿ 56 ನಿವೇಶನಗಳನ್ನು ವಿಲೇವಾರಿ ಮಾಡಲಾಗಿದೆ.<br><br>2. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದಲಭ್ಯವಿರುವ ಮೂಲೆ / ಬಿಡಿ ನಿವೇಶನಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದೆ.<br><br>3. ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಳೆಯ ಬಡಾವಣೆಗಳಲ್ಲಿ ಲಭ್ಯವಿರುವ ನಿವೇಶನಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಲಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಒಂದು ಬಾರಿ ಇ-ಹರಾಜು ಮಾಡಲಾಗಿರುತ್ತದೆ. |

| | | |
|---|---|---|
| | | 4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶ್ರೀ. ಎ.ಬಿ. ವಾಜಪೇಯಿ ವಸತಿ ಬಡಾವಣೆಯಲ್ಲಿ ಒಟ್ಟು 386 ಮೂಲೆ ನಿವೇಶನಗಳಿದ್ದು, ಇ-ಹರಾಜು ಮೂಲಕ 144 ನಿವೇಶನಗಳನ್ನು ವಿಲೇವಾರಿ ಮಾಡಲಾಗಿರುತ್ತದೆ.<br><br>5. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈ ಹಿಂದೆ ನಿರ್ಮಿಸಿರುವ ಬಡಾವಣೆಯಲ್ಲಿ ಪ್ರಸ್ತುತ 4 ಬಿಡಿ ನಿವೇಶನಗಳು ಬಾಕಿ ಇದ್ದು, ಪ್ರಾಧಿಕಾರದ ಆರ್ಥಿಕ ಪರಿಸ್ಥಿತಿಯ ಅನುಗುಣವಾಗಿ ಇ-ಹರಾಜು ಮೂಲಕ ಹರಾಜುಮಾಡಲು ಕ್ರಮವಹಿಸಲಾಗುವುದು.<br><br>6. ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಿರುವ ಹಳೆಯ ಶ್ರೀ ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳನ್ನು ಇ-ಹರಾಜು ಮೂಲಕ ವಿಲೇ ಮಾಡಿರುವ ವಿವರಗಳು<br>• ಒಟ್ಟು ನಿವೇಶನಗಳ ಸಂಖ್ಯೆ: 1974<br>• ಮೂಲೇ ನಿವೇಶನಗಳ ಸಂಖ್ಯೆ:248<br>• ಬಿಡಿ ಮಧ್ಯಂತರ ನಿವೇಶನಗಳ ಸಂಖ್ಯೆ: 1626<br>• ಹಂಚಿಕೆಯಾಗಿರುವ ಮೂಲೆ ನಿವೇಶನಗಳ ಸಂಖ್ಯೆ:71<br>• ಹಂಚಿಕೆಯಾಗಿರುವ ಬಿಡಿ ಮಧ್ಯಂತರ ನಿವೇಶನಗಳ ಸಂಖ್ಯೆ:1559<br>• ಹಂಚಿಕೆಗೆ ಲಭ್ಯವಿರುವ ಮೂಲೆ ನಿವೇಶನಗಳ ಸಂಖ್ಯೆ: 177<br>• ಹಂಚಿಕೆಗೆ ಲಭ್ಯವಿರುವ ಬಿಡಿ ಮಧ್ಯಂತರ ನಿವೇಶನಗಳ ಸಂಖ್ಯೆ: 67<br><br>7. ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಳೆಯ ಬಡಾವಣೆಗಳಲ್ಲಿ ಲಭ್ಯವಿರುವ ಬಿಡಿ, ಮೂಲೆ ಹಾಗೂ ವಾಣಿಜ್ಯ ನಿವೇಶನಗಳನ್ನು ನಿಯಮದನ್ವಯ ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದೆ.<br><br>8. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದಿಂದ ಲಭ್ಯವಿರುವ ನಿವೇಶನಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದೆ.<br><br>9. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹೊಸಪೇಟೆ ನಗರದ ಮಾರುತಿ ನಗರ ಬಡಾವಣೆಯಲ್ಲಿ ಒಟ್ಟು 02 ಮೂಲೆ ನಿವೇಶನಗಳು ಲಭ್ಯವಿದ್ದು, ದಿನಾಂಕ:06-03-2026 ರಂದು ಇ-ಹರಾಜು ಮಾಡಲು ಪ್ರಕಟಣೆ ನೀಡಲಾಗಿದೆ. |

10. ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ 2023-24 ನೇ ಸಾಲಿನಲ್ಲಿ ಇ-ಹರಾಜು ಕರೆಯಲಾದ 100 ನಿವೇಶನಗಳಲ್ಲಿ 81 ನಿವೇಶನಗಳು ಮತ್ತು 2024-25 ರಲ್ಲಿ 102 ನಿವೇಶಗಳಲ್ಲಿ 67 ನಿವೇಶನಗಳನ್ನು ಹಾಗೂ 2025-26 ನೇ ಸಾಲಿನಲ್ಲಿ ಕರೆಯಲಾದ 100 ನಿವೇಶನಗಳಲ್ಲಿ 77 ಮೂಲೆ/ಬಿಡಿ ನಿವೇಶನಗಳನ್ನುಇ-ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ.

11. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದೆ.

12. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಒಟ್ಟು 29 ವಿವಿಧ ಅಳತೆಯ ಮೂಲೆ ನಿವೇಶನಗಳನ್ನು ಇ ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ.

13. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಒಟ್ಟು 4 ನಿವೇಶನಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ.

14. ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಲಭ್ಯವಿರುವ ಮೂಲೆ / ಬಿಡಿ ನಿವೇಶನಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದೆ.

15. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಹಳೆಯ ಬಡಾವಣೆಗಳಲ್ಲಿ ಲಭ್ಯವಿರುವ ವಾಣಿಜ್ಯ/ ಮೂಲೆ ನಿವೇಶನಗಳನ್ನು ಇ- ಹರಾಜು ಮೂಲಕ ನಿಯಮಾನುಸಾರ ವಿಲೇವಾರಿ ಮಾಡಲಾಗುತ್ತಿದೆ.

16. ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಾಣವಾಗಿರುವ ಹಳೆಯ ಬಡಾವಣೆಗಳಲ್ಲಿ ಖಾಲಿ ಇರುವ ನಿವೇಶನಗಳನ್ನು ಇ-ಹರಾಜು ಮೂಲಕ ಹಂಚಿಕೆ ಮಾಡಲಾಗುತ್ತಿದೆ. ಕಳೆದ 03 ವರ್ಷಗಳಿಂದ ಹಂಚಿಕೆ ಮಾಡಿರುವ ನಿವೇಶನಗಳ ಪಟ್ಟಿಯ ವಿವರಗಳು ಈ ಕೆಳಗಿನಂತಿವೆ.

    I. ದಿನಾಂಕ:31-07-2023 ರಂದು ಹೊರಡಿಸಿದ ಇ-ಹರಾಜು ಪ್ರಕಟಣೆ ವಿವರಗಳು:
        - ಬಿಡ್ಡನ್ನು ಅಂಗಿಕರಿಸಿರುವ ನಿವೇಶನಗಳ ಸಂಖ್ಯೆ- 53
        - ಒಬ್ಬರೇ ಬಿಡ್ಡುದಾರರು ಭಾಗವಹಿಸಿರುವುದರಿಂದ ತಿರಸ್ಕರಿಸಿರುವ ನಿವೇಶನಗಳ ಸಂಖ್ಯೆ – 11

| | | |
|---|---|---|
| | | • ಸ್ಪರ್ಧಾತ್ಮಕದೆ ಬರದೇ ಇರುವುದರಿಂದ ತಿರಸ್ಕರಿಸಿರುವ ಬಿಡ್ಡಿನ ಒಟ್ಟು ನಿವೇಶನಗಳ ಸಂಖ್ಯೆ – 01<br>• ಹರಾಜಿನಲ್ಲಿ ಯಾರು ಬಿಡ್ಡುದಾರರು ಭಾಗವಹಿಸದೇ ಇರುವ ನಿವೇಶನಗಳ ಒಟ್ಟು ಸಂಖ್ಯೆ – 32<br>II. ದಿನಾಂಕ:21-07-2025 ರಂದು ಹೊರಡಿಸಿದ ಇ-ಹರಾಜು ಪ್ರಕಟಣೆಯ ವಿವರಗಳು:<br>• ಬಿಡ್ಡನ್ನು ಅಂಗೀಕರಿಸಿರುವನಿ ವೇಶನಗಳ ಸಂಖ್ಯೆ- 119<br>• ಒಬ್ಬರೇ ಬಿಡ್ಡುದಾರರು ಭಾಗವಹಿಸಿರುವುದರಿಂದ ತಿರಸ್ಕರಿಸಿರುವ ನಿವೇಶನಗಳ ಸಂಖ್ಯೆ – 16<br>• ಹರಾಜಿನಲ್ಲಿ ಯಾರು ಬಿಡ್ಡುದಾರರು ಭಾಗವಹಿಸದೇ ಇರುವ ನಿವೇಶನಗಳ ಒಟ್ಟು ಸಂಖ್ಯೆ – 64 |

**ಸಂಖ್ಯೆ: ನಅಇ 96 ಬೆಮಪ್ರಾ 2026 (ಇ-ಕಡತ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1681 (1993) |
| ಸದಸ್ಯರ ಹೆಸರು | : **ಡಾ|| ಕೆ. ಗೋವಿಂದರಾಜ್** (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 24.03.2026 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಹಾಪ್ ಕಾಮ್ಸ್ (ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ) ಮಳಿಗೆಗಳಿವೆ; (ಜಿಲ್ಲಾವಾರು ವಿವರಗಳನ್ನು ನೀಡುವುದು) | ಪ್ರಸ್ತುತ ರಾಜ್ಯದಲ್ಲಿರುವ ಹಾಪ್ ಕಾಮ್ಸ್ ಮಳಿಗೆಗಳು 410. ಮಳಿಗೆಗಳ ಜಿಲ್ಲಾವಾರು ವಿವರ ಕೆಳಕಂಡಂತಿದೆ:- |

| ಕ್ರ.ಸಂ. | ಹಾಪ್ ಕಾಮ್ಸ್ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಮಳಿಗೆಗಳ ಸಂಖ್ಯೆ |
|---|---|---|
| 1 | ಬೆಂಗಳೂರು ಹಾಪ್ ಕಾಮ್ಸ್ | |
| | ಅ) ಬೆಂಗಳೂರು ನಗರ | 174 |
| | ಆ) ಬೆಂಗಳೂರು ಗ್ರಾಮಾಂತರ | 0 |
| | ಇ) ರಾಮನಗರ | 0 |
| | ಈ) ಕೋಲಾರ | 04 |
| | ಉ) ಚಿಕ್ಕ ಬಳ್ಳಾಪುರ | 0 |
| | **ಒಟ್ಟು** | **178** |
| 2 | ಬಾಗಲಕೋಟೆ | 1 |
| 3 | ಬೆಳಗಾವಿ | 8 |
| 4 | ಬೀದರ್ | 2 |
| 5 | ಬಳ್ಳಾರಿ | 1 |
| 6 | ಚಾಮರಾಜನಗರ | 9 |
| 7 | ಚಿತ್ರದುರ್ಗ | 17 |
| 8 | ಚಿಕ್ಕಮಗಳೂರು | 2 |
| 9 | ದಾವಣಗೆರೆ | 9 |
| 10 | ಧಾರವಾಡ | 6 |
| 11 | ಗದಗ | 7 |
| 12 | ಹಾವೇರಿ | 1 |
| 13 | ಹಾಸನ | 8 |
| 14 | ಕಲಬುರಗಿ | 12 |
| 15 | ಕೊಡಗು | 3 |
| 16 | ಕೊಪ್ಪಳ | 9 |
| 17 | ಮಂಡ್ಯ | 13 |
| 18 | ಮೈಸೂರು | 30 |
| 19 | ದಕ್ಷಿಣ ಕನ್ನಡ & ಉಡುಪಿ | 17 |
| 20 | ರಾಯಚೂರು | 5 |
| 21 | ಶಿವಮೊಗ್ಗ | 37 |

| | | |
|---|---|---|
| 22 | ಉತ್ತರ ಕನ್ನಡ | 12 |
| 23 | ತುಮಕೂರು | 15 |
| 24 | ವಿಜಯಪುರ | 8 |
| | **ಒಟ್ಟು** | **410** |

ಆ) ಎಷ್ಟು ಮಳಿಗೆಗಳು ಬಂದ್ ಆಗಿವೆ; ಕಾರಣಗಳೇನು; (ವಿವರಗಳನ್ನು ನೀಡುವುದು)

ಬಂದ್ ಆಗಿರುವ ಹಾಪ್ ಕಾಮ್ಸ್ ಮಳಿಗೆಗಳು 147. ಜಿಲ್ಲಾವಾರು ವಿವರ ಈ ಕೆಳಕಾಣಿಸಿದಂತಿದೆ:-

| **ಕ್ರ.ಸಂ.** | **ಹಾಪ್ ಕಾಮ್ಸ್** | **ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ** |
|---|---|---|
| 1 | ಬೆಂಗಳೂರು ಹಾಪ್ ಕಾಮ್ಸ್ | |
| | ಅ) ಬೆಂಗಳೂರು ನಗರ | 84 |
| | ಆ) ಬೆಂಗಳೂರು ಗ್ರಾಮಾಂತರ | 0 |
| | ಇ) ರಾಮನಗರ | 0 |
| | ಈ) ಕೋಲಾರ | 4 |
| | ಉ) ಚಿಕ್ಕ ಬಳ್ಳಾಪುರ | 0 |
| | **ಒಟ್ಟು** | **88** |
| 2 | ಬಾಗಲಕೋಟೆ | 0 |
| 3 | ಬೆಳಗಾವಿ | 3 |
| 4 | ಬೀದರ್ | 2 |
| 5 | ಬಳ್ಳಾರಿ | 2 |
| 6 | ಚಾಮರಾಜನಗರ | 1 |
| 7 | ಚಿತ್ರದುರ್ಗ | 2 |
| 8 | ಚಿಕ್ಕಮಗಳೂರು | 1 |
| 9 | ದಾವಣಗೆರೆ | 0 |
| 10 | ಧಾರವಾಡ | 3 |
| 11 | ಗದಗ | 0 |
| 12 | ಹಾವೇರಿ | 0 |
| 13 | ಹಾಸನ | 4 |
| 14 | ಕಲಬುರಗಿ | 0 |
| 15 | ಕೊಡಗು | 0 |
| 16 | ಕೊಪ್ಪಳ | 0 |
| 17 | ಮಂಡ್ಯ | 3 |
| 18 | ಮೈಸೂರು | 16 |
| 19 | ದಕ್ಷಿಣ ಕನ್ನಡ & ಉಡುಪಿ | 3 |
| 20 | ರಾಯಚೂರು | 0 |
| 21 | ಶಿವಮೊಗ್ಗ | 1 |
| 22 | ಉತ್ತರ ಕನ್ನಡ | 1 |
| 23 | ತುಮಕೂರು | 3 |
| 24 | ವಿಜಯಪುರ | 14 |
| | **ಒಟ್ಟು** | **147** |

ಹಾಪ್‌ಕಾಮ್ಸ್ ಕೇಂದ್ರಗಳು ಮುಚ್ಚಲು ಕಾರಣಗಳು ಈ ಕೆಳಕಂಡಂತಿವೆ:-

- ಜನಸಂದಣಿ ಇರದ ಪ್ರದೇಶಗಳಲ್ಲಿ ಹೆಚ್ಚು ವ್ಯಾಪಾರ

ವಹಿವಾಟು ನಡೆಯದೇ ಇರುವುದರಿಂದ ಹಾಗೂ ಖಾಸಗಿಯವರು ರಸ್ತೆ ಬದಿಗಳಲ್ಲಿ/ಅಂಗಡಿಗಳಲ್ಲಿ ಹಣ್ಣು-ತರಕಾರಿ ಮಾರಾಟ ಮಾಡುತ್ತಿರುವುದರಿಂದ ವ್ಯಾಪಾರ ವಹಿವಾಟು ಕಡಿಮೆಯಾಗಿ ಮಳಿಗೆಗಳನ್ನು ಮುಚ್ಚಲಾಗಿದೆ.

- ಬೆಂಗಳೂರಿನ ಪ್ರತಿಷ್ಠಿತ ಮಾಲ್ ಗಳು, ಖಾಸಗಿ ಆನ್ ಲೈನ್ ಮಾರುಕಟ್ಟೆಗಳಿಂದ ಪೈಪೋಟಿ ಉಂಟಾಗಿರುತ್ತದೆ.

- ಬೆಂಗಳೂರು/ಮೈಸೂರು ಹಾಗೂ ಇನ್ನಿತರೆ ಹಾಪ್ ಕಾಮ್ಸ್ ನೌಕರರು ಹೆಚ್ಚಿನ ಪ್ರಮಾಣದಲ್ಲಿ ನಿವೃತ್ತಿ ಹೊಂದಿರುತ್ತಾರೆ. ಇದರಿಂದಾಗಿ ನೌಕರರ ಕೊರತೆ ಉಂಟಾಗಿ ಮಳಿಗೆಗಳನ್ನು ಮುಚ್ಚಲಾಗಿರುತ್ತದೆ.

- ರಸ್ತೆಯ ಅಗಲೀಕರಣ /ಮೆಟ್ರೋ ಕಾಮಗಾರಿಯಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ ಜೊತೆಗೆ ಇತರೆ ಜಿಲ್ಲೆಗಳಲ್ಲಿಯೂ ರಸ್ತೆಯ ಅಗಲೀಕರಣದಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ.

ಸಿಬ್ಬಂದಿ ಕೊರತೆ, ಮೂಲ ಸೌಕರ್ಯದ ಕೊರತೆ, ಖಾಸಗಿ ಆನ್‌ಲೈನ್ ಮಾರುಕಟ್ಟೆಗಳ ಪೈಪೋಟಿಯೂ ಸೇರಿದಂತೆ ಹಾಪ್‌ಕಾಮ್ಸ್ ಮಳಿಗೆಗಳನ್ನು ಮುಚ್ಚಲು ಕಾರಣಗಳಾಗಿವೆ.

**ಇ)** ಉಳಿದ ಹಾಪ್‌ಕಾಮ್ಸ್‌ಗಳಲ್ಲಿ ಎಷ್ಟು ಹಾಪ್‌ಕಾಮ್ಸ್‌ಗಳು ಲಾಭ ಮಾಡುತ್ತಿವೆ; ಎಷ್ಟು ಹಾಪ್‌ಕಾಮ್ಸ್ ಗಳು ನಷ್ಟದಲ್ಲಿವೆ; ನಷ್ಟಕ್ಕೆ ಕಾರಣಗಳೇನು;

ಉಳಿದ/ಕಾರ್ಯ ನಿರ್ವಹಿಸುತ್ತಿರುವ 24 ಹಾಪ್‌ಕಾಮ್ಸ್‌ಗಳಲ್ಲಿ 2024-25ನೇ ಸಾಲಿಗೆ 19 ಹಾಪ್‌ಕಾಮ್ಸ್‌ಗಳು ಲಾಭ ಮಾಡುತ್ತಿವೆ; 05 ಹಾಪ್‌ಕಾಮ್ಸ್‌ಗಳು ನಷ್ಟದಲ್ಲಿವೆ.

ಹಾಪ್‌ಕಾಮ್ಸ್ ನಷ್ಟಕ್ಕೆ ಕಾರಣಗಳನ್ನು ಹಿಂದಿನ ಉತ್ತರ (ಅ) ರಲ್ಲಿ ನೀಡಲಾಗಿದೆ.

**ಈ)** ಹಾಪ್‌ಕಾಮ್ಸ್ ಗಳಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ; ಈ ಪೈಕಿ ಎಷ್ಟು ಹುದ್ದೆಗಳು ಖಾಲಿ ಇವೆ:

ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 24 ಹಾಪ್‌ಕಾಮ್ಸ್ ಗಳಲ್ಲಿ ಒಟ್ಟು 782 ಹುದ್ದೆಗಳು ಮಂಜೂರಾಗಿವೆ; ಈ ಪೈಕಿ 344 ಹುದ್ದೆಗಳು ಖಾಲಿ ಇವೆ:

**ಉ)** ಕಳೆದ 3 ವರ್ಷಗಳಲ್ಲಿ ಹಾಪ್‌ಕಾಮ್ಸ್ ಅನುಭವಿಸಿದ ನಷ್ಟ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು)

ಕಳೆದ ಮೂರು ವರ್ಷಗಳಲ್ಲಿ ಹಾಪ್‌ಕಾಮ್ಸ್ ಅನುಭವಿಸಿದ ನಷ್ಟ ಒಟ್ಟು ರೂ.665.7 ಲಕ್ಷಗಳು ಇದ್ದು, ವಿವರಗಳು ಕೆಳಗಿನಂತಿವೆ:-

| ಹಾಪ್ ಕಾಮ್ಸ್ | ನಷ್ಟ (ರೂ. ಲಕ್ಷಗಳಲ್ಲಿ) | | | ಒಟ್ಟು |
|---|---|---|---|---|
| | 2022-23 | 2023-24 | 2024-25 | |
| ಬೆಂಗಳೂರು | 415.07 | 72.30 | - | 487.37 |
| ಬಾಗಲಕೋಟೆ | 0.23 | - | - | 0.23 |
| ಬೀದರ್ | 10.13 | - | - | 10.13 |
| ಬಳ್ಳಾರಿ | 2.03 | 2.40 | 1.13 | 5.56 |
| ಚಾಮರಾಜನಗರ | 6.89 | 2.69 | 3.09 | 12.67 |
| ಚಿತ್ರದುರ್ಗ | 1.11 | - | - | 1.11 |

| | | | | | | |
|---|---|---|---|---|---|---|
| | | ಹಾವೇರಿ | 0.30 | 0.15 | - | 0.45 |
| | | ಹಾಸನ | 6.78 | - | 18.98 | 25.76 |
| | | ಮಂಡ್ಯ | 25.10 | - | - | 25.10 |
| | | ಮೈಸೂರು | 58.65 | 31.72 | - | 90.37 |
| | | ದ.ಕ.& ಉಡುಪಿ | - | - | 6.18 | 6.18 |
| | | ರಾಯಚೂರು | - | - | 0.77 | 0.77 |
| | | **ಒಟ್ಟು ನಷ್ಟ** | **526.29** | **109.26** | **30.15** | **665.7** |
| ಊ) | ಹಾಪ್‌ಕಾಮ್ಸ್ ಅನ್ನು ಲಾಭದ ಹಳಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಗಳನ್ನು ನೀಡುವುದು) | **ಹಾಪ್‌ಕಾಮ್ಸ್ ಅನ್ನು ಲಾಭದ ಹಳಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳು ಕೆಳಕಂಡಂತಿವೆ:-**<br><br>1. ಬೆಂಗಳೂರು ಹಾಪ್‌ಕಾಮ್ಸ್ ಸಂಸ್ಥೆಯ ವಹಿವಾಟಿನ ಅಭಿವೃದ್ಧಿಗಾಗಿ 2024-25 ನೇ ಸಾಲಿನಲ್ಲಿ ರೂ.15 ಕೋಟಿಗಳ ದುಡಿಯುವ ಬಂಡವಾಳ ನೀಡಲಾಗಿರುತ್ತದೆ.<br><br>2. ಹಣ್ಣು ಮತ್ತು ತರಕಾರಿಗಳನ್ನು ಸರಬರಾಜು ಮಾಡಲು ಜಿಲ್ಲಾ ಹಾಪ್‌ಕಾಮ್ಸ್‌ಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ/885/ವೆಚ್ಚ-12/2025 ದಿನಾಂಕ:23.10.2025 ರನ್ವಯ 4ಜಿ ವಿನಾಯಿತಿ ದೊರಕಿದ್ದು, ರಾಜ್ಯದಲ್ಲಿನ ಸರ್ಕಾರಿ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಕೇಂದ್ರ ಕಾರಾಗೃಹ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವಸತಿ ನಿಲಯಗಳಿಗೆ, ವಸತಿ ಶಾಲೆಗಳಿಗೆ, ಆಶ್ರಮ ಶಾಲೆಗಳಿಗೆ, ಮೊರಾರ್ಜಿ ದೇಸಾಯಿ ವಸತಿ ನಿಲಯಗಳಿಗೆ, ಸರ್ಕಾರದ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ, ಆಸ್ಪತ್ರೆಗಳಿಗೆ ಇತ್ಯಾದಿ) ವಿವಿಧ ಜಿಲ್ಲಾ ಹಾಪ್‌ಕಾಮ್ಸ್‌ಗಳ ಮುಖೇನ ಹಣ್ಣು ಮತ್ತು ತರಕಾರಿಗಳನ್ನು ಪೂರೈಸುತ್ತಿದ್ದು, ಹಾಪ್‌ಕಾಮ್ಸ್‌ಗಳ ಲಾಭದಾಯಕತೆ ಮತ್ತು ಆರ್ಥಿಕ ಸುಧಾರಣೆಗೆ ಸಹಾಯಕವಾಗಿರುತ್ತದೆ.<br><br>3. ಹಾಪ್‌ಕಾಮ್ಸ್‌ಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ (ಹಣ್ಣು ಮತ್ತು ತರಕಾರಿಗಳ ಮಾರಾಟ ಮಳಿಗೆಗಳು/ಸಂಗ್ರಹಣಾ ಕೇಂದ್ರ/ಶೀಥಲಗೃಹ/ಹಣ್ಣು ಮಾಗಿಸುವ ಘಟಕ/ಪ್ಯಾಕ್ ಹೌಸ್ ಇತ್ಯಾದಿ), ಹಣ್ಣು ಮತ್ತು ತರಕಾರಿಗಳ ಸಾಗಣೆಗೆ ಮೊಬೈಲ್ ವ್ಯಾನುಗಳ ಖರೀದಿಗಾಗಿ, ಸ್ಮಾರ್ಟ್ ಬಿಲ್ಲಿಂಗ್ ಮಿಷನ್‌ಗಳ ಖರೀದಿ ಇತ್ಯಾದಿ ಘಟಕಗಳಿಗೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರೂ.55.20 ಕೋಟಿ ಅನುದಾನವನ್ನು ಹಾಪ್‌ಕಾಮ್ಸ್‌ಗಳಿಗೆ ಒದಗಿಸಲಾಗಿರುತ್ತದೆ (2008-09 ರಿಂದ 2025-26ನೇ ಸಾಲಿನವರೆಗೆ). | | | | |

ಸಂಖ್ಯೆ: HORTI 164 HGM 2026

**(ಎಸ್. ಎಸ್. ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು